# <u>ಕರ್ನಾಟಕ ಲೋಕಾಯುಕ್ತ</u>

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-5844/2013/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 08/03/2017

## <u>ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ</u>

ವಿಷಯ: ಶ್ರೀ ಗುರುರಾಜ ಹೆಬ್ಬಾರ್, ಹಂಗಳೂರು ಗ್ರಾಮ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಗುರುರಾಜ ಹೆಬ್ಬಾರ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಕುಂದಾಪುರ ತಾಲ್ಲೂಕಿನ ಬಡಾಕೆರೆ ಹಂಗಳೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀಮತಿ ಖುರ್ಷಿದ್ ಬೇಗಮ್.ಕೆ ಇವರು ಮುಖ್ಯೋಪಾಧ್ಯಾಯಿನಿ ಆಗಿದ್ದು, ಇವರು ಶಾಲಾ ನಿರ್ವಹಣಾ ಅನುದಾನ, ನೂತನ ಕಟ್ಟಡ ಅನುದಾನಿಗಳ ಅನುದಾನ ಹಾಗೂ ಶಿಕ್ಷಕರ ಅನುದಾನದಲ್ಲಿ ಅಕ್ರಮವನ್ನು ಎಸಗಿದ್ದು, ಮಾಹಿತಿ ಹಕ್ಕಿನಡಿಯಲ್ಲಿ ಈವರೆಗೂ ಪಡೆದ ಮಾಹಿತಿ ಪ್ರಕಾರ ಅನುದಾನವು ದುರ್ಬಳಕೆಯಾಗಿರುತ್ತದೆ. ಎಸ್.ಡಿ.ಎಂ.ಸಿ ಖಾತೆಯಿಂದ ಶಿಕ್ಷಕರ ಖಾತೆಗೆ ಹಣ ವರ್ಗಾವಣೆಯಾಗಿರುತ್ತದೆ. ಸ್ವಂತಕ್ಕಾಗಿ ಎಂದು ಅನೇಕ ಚೆಕ್ಕುಗಳನ್ನು ಸದರಿ ಎದುರುದಾರರು ಪಡೆದಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿರುತ್ತದೆ. ರಸೀತಿಗಳನ್ನು ಸೃಷ್ಟಿಸಿ ಹಣವನ್ನು ತೆಗೆಯಲಾಗಿರುತ್ತದೆ. ಶಾಲೆಯ ಯಾವ ಲೆಕ್ಕಪರಿಶೋಧನೆಯಾಗಿರುವುದಿಲ್ಲ. ಆದ್ದರಿಂದ, ಸದರಿಯವರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರಶಿಕ್ಷಣಾಧಿಕಾರಿಯವರಿಂದ ವರದಿಯನ್ನು ಕರೆಯಲಾಗಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವರದಿಯನ್ನು ಸಲ್ಲಿಸಿರುವುದಾಗಿ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ರಜತಾದ್ರಿ, ಮಣಿಪಾಲ್, ಉಡುಪಿ ಇವರಿಗೆ ಬರೆದಿರುವ ಪತ್ರದ ಪ್ರತಿಯಲ್ಲಿ ತಿಳಿಸಿರುತ್ತಾರೆ. ಆದರೆ, ಸದರಿ ವರದಿಯನ್ನು ಈ ಕಛೇರಿಯಲ್ಲಿ ಸ್ವೀಕರಿಸಿರುವ ಬಗ್ಗೆ ದಾಖಲಾತಿ ಇರುವುದಿಲ್ಲ. ಸದರಿ ಪತ್ರದಲ್ಲಿ

ಶ್ರೀ ಗಣೇಶ್ ಹೆಬ್ಬಾರ್ ಇವರು ಸಲ್ಲಿಸಿರುದ ದೂರಿನಂತೆ ಶೇ.90 ರಷ್ಟು ದಾಖಲೆಗಳನ್ನು ಒದಗಿಸಲು ಶ್ರೀಮತಿ ಖುರ್ಷಿದಾ ಬೇಗಮ್ ಇವರು ವಿಫಲರಾಗಿರುತ್ತಾರೆ ಮತ್ತು ಹಣಕಾಸಿಗೆ ಸಂಬಂಧಿಸಿದಂತೆ ಯಾವುದೇ ಸಮರ್ಪಕ ದಾಖಲೆ ನಿರ್ವಹಿಸದೇ ಅಕ್ರಮವೆಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಆದ್ದರಿಂದ, ಈ ಶಿಕ್ಷಕಿಗೆ ಈಗಾಗಲೇ ನೀಡಿರುವ ಮುಂಬಡ್ತಿಯನ್ನು ತಡೆಯಿಡಿಯಲು ಕೋರಲಾಗಿದೆ ಎಂದು ತಿಳಿಸಿರುತ್ತಾರೆ. (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ನಂತರ ಗೌರವಾನ್ವಿತ ಉಪಲೋಕಾಯುಕ್ತರ ಉಡುಪಿ ಪ್ರವಾಸದ ಸಮಯದಲ್ಲಿ ದೂರುದಾರರು ತಾವು ಮಾಡಿರುವ ದೂರಿಗೆ ಸಂಬಂಧಿಸಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕುಂದಾಪುರ ಇವರು ಪ್ರಾಥಮಿಕ ವಿಚಾರಣೆ ಮಾಡಿ ಅದರಲ್ಲಿ ಅವ್ಯವಹಾರ ನಡೆದಿರುವುದು ಸಾಬೀತಾಗಿರುತ್ತದೆ ಎಂದು ದಿ:11/03/2014 ರಂದು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆ ಇವರಿಗೆ ವರದಿಯನ್ನು ಸಲ್ಲಿಸಿರುತ್ತಾರೆ ಎಂದು ತಿಳಿಸಿದ್ದು, ಈ ಬಗ್ಗೆ ಗೌರವಾನ್ವಿತರಲ್ಲಿ ಸದರಿ ಅವ್ಯವಹಾರದ ಬಗ್ಗೆ ಪರಿಪೂರ್ಣ ಇಲಾಖಾ ವಿಚಾರಣೆ ಮಾಡಿ ಹಣದ ಅವ್ಯವಹಾರವಾಗಿರುವುದು ಕಂಡು ಬಂದಲ್ಲಿ, ಸದರಿ ಹಣವನ್ನು ಸಂಬಂಧಪಟ್ಟವರಿಂದ ವಸೂಲು ಮಾಡಿ, ಅವರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಂಡು ನಾಲ್ಕು ತಿಂಗಳ ಒಳಗಾಗಿ ವರದಿ ಸಲ್ಲಿಸುವುದಾಗಿ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಇವರು ನಿವೇದಿಸಿಕೊಂಡಿರುತ್ತಾರೆ.

3. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕುಂದಾಪುರ ಇವರ ಪ್ರಾಥಮಿಕ ವಿಚಾರಣಾ ವರದಿಯನ್ನು ಎದುರುದಾರರಿಗೆ ರವಾನಿಸಿ ಅವರಿಂದ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ವರದಿಯಲ್ಲಿನ ದೂರಿನಂಶಗಳನ್ನು ಅಲ್ಲಗಳೆದು 2012 ರಲ್ಲಿ ಸರ್ಕಾರದಿಂದ ನೇಮಕಗೊಂಡ ಧಾರವಾಡದ ಮೂಲದ ಲೆಕ್ಕಪರಿಶೋಧಕರು ಬಿಆರ್‌ಸಿ ಹಾಗೂ ಎಸ್‌ಎಸ್‌ಎ ಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿರುತ್ತಾರೆ. ಸದರಿಯವರುಗಳು ಲೆಕ್ಕದಲ್ಲಿ ಯಾವುದೇ ನ್ಯೂನತೆಗಳನ್ನು ಕಂಡು ಹಿಡಿದಿರುವುದಿಲ್ಲ. ದೂರುದಾರರು ತನ್ನ ಸಂಬಂಧಿಕರಿಗೆ ಕಾಮಗಾರಿ ನೀಡಬೇಕೆಂದು ಒತ್ತಾಯಿಸುತ್ತಿದ್ದು, ಈ ಬಗ್ಗೆ ಕಾಮಗಾರಿಯನ್ನು ಕೊಡುವುದು ಬಿಡುವುದು ಎಸ್‌ಡಿಎಂಸಿ ಯವರಿಗೆ ಸೇರಿದ ವಿಷಯವೆಂದು ತಿಳಿಸಿದ್ದ ಮೇರೆಗೆ ತಮ್ಮ ಮೇಲಿನ ದ್ವೇಷದಿಂದ ಈ ರೀತಿ ದೂರನ್ನು ನೀಡಿರುತ್ತಾರೆ. ಸದರಿಯವರ ಸಂಬಂಧಿಕರಿಗೆ ಎಸ್‌ಡಿಎಂಸಿ ಯವರು ಗುತ್ತಿಗೆ ನೀಡಲು ನಿರಾಕರಿಸಿದ್ದರು, ಆದ್ದರಿಂದ ಸದರಿ ದ್ವೇಷದಿಂದ ತನ್ನ ಮೇಲೆ ಈ ರೀತಿ ದೂರು ನೀಡಿರುತ್ತಾರೆಂದು ತಿಳಿಸಿರುತ್ತಾರೆ.

4. ಆ ನಂತರ ಶ್ರೀ ದಿವಾಕರ್ ಶೆಟ್ಟಿ, ಡಿಡಿಪಿಐ, ಉಡುಪಿ ಇವರು ಗೌರವಾನ್ವಿತರ ಮುಂದೆ ಹಾಜರಾಗಿ ವರದಿಯನ್ನು ಸಲ್ಲಿಸುವುದಾಗಿ ತಿಳಿಸಿದ್ದು, ಅದರಂತೆ, ಶ್ರೀ ರಾಮಚಂದ್ರ ರಾಜೆ ಅರಸ್, ಇ.ಒ, ಡಿಡಿಪಿಐ ರವರ ಕಛೇರಿ, ಉಡುಪಿ ಇವರು ದಿ:04/06/2015ರ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ

ಇಲಾಖೆ, ಉಡುಪಿ ಇವರ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿ ಶ್ರೀಮತಿ ಖುರ್ಷಿದ್ ಬೇಗಮ್ (ಎದುರುದಾರರು) ರವರು ರೂ.4,39,597/– ಮೊತ್ತದ ಹಣವನ್ನು ದುರುಪಯೋಗಪಡಿಸಿಕೊಂಡಿದ್ದು, ಅದನ್ನು ಶೇ.8ರ ಬಡ್ಡಿ ಸಹಿತ ಅವರಿಂದ ವಸೂಲಾತಿಗಾಗಿ ಕ್ರಮ ಜರುಗಿಸಲಾಗಿದೆ ಎಂದು ತಿಳಿಸಿರುತ್ತಾರೆ ಹಾಗೂ ಸದರಿ ಶಿಕ್ಷಕಿಯ ಮೇಲೆ ಹಣದ ದುರುಪಯೋಗಕ್ಕಾಗಿ ಕ್ರಿಮಿನಲ್ ಮೊಕದ್ಧಮೆಯನ್ನು ದಾಖಲಿಸಿ ಎಫ್.ಐ.ಆರ್ ಪ್ರತಿಯನ್ನು ಹಾಜರುಪಡಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ತಿಳಿಸಿರುವುದಾಗಿ ತೋರಿಸಲು ಸದರಿ ಕ್ಷೇತ್ರ ಶಿಕ್ಷಣಾಧಿಕಾರಿ, ಕುಂದಾಪುರ ವಲಯ ಇವರಿಗೆ ಬರೆದಿರುವ ಪತ್ರದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಹಾಗೆಯೇ ಸದರಿ ಶ್ರೀಮತಿ ಖುರ್ಷಿದಾ ಬೇಗಮ್ ಇವರಿಗೆ 15 ದಿನದಲ್ಲಿ ಸದರಿ ರೂ.4,39,597/– ಮೊತ್ತದ ಹಣವನ್ನು ಶೇ.8ರ ಬಡ್ಡಿಯೊಂದಿಗೆ ಪಾವತಿಸಲು ಆದೇಶಿಸಿರುವ ಬಗ್ಗೆ ಆದೇಶದ ಪ್ರತಿಯನ್ನು ಸಹ ಹಾಜರುಪಡಿಸಿರುತ್ತಾರೆ. ನಂತರ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಣಿಪಾಲ್ ಇವರಿಂದ ಹಣ ವಸೂಲಾತಿ ಬಗ್ಗೆ ಮತ್ತು ಮುಂದೆ ಕೈಗೊಳ್ಳಲಾದ ಮುಂದುವರೆದ ಕ್ರಮದ ಬಗ್ಗೆ ವರದಿ ಸಲ್ಲಿಸಲು ಕೋರಿ ಪತ್ರ ಬರೆಯಲಾಗಿದ್ದು, ಸದರಿ ಉಪನಿರ್ದೇಶಕರು ದಿ:26/12/2015 ರಲ್ಲಿ ಪತ್ರ ಬರೆದು ಶ್ರೀಮತಿ ಖುರ್ಷಿದಾ ಬೇಗಮ್ ಇವರು ಮೇಲೆ ಹೇಳದ ಹಣವನ್ನು ಸಂದಾಯ ಮಾಡುವ ಬಗ್ಗೆ ನೋಟೀಸ್ ನೀಡಲಾಗಿದ್ದು ಹಾಗೂ ಅವರ ವಿರುದ್ಧ ಕ್ರಿಮಿನಲ್ ಮೊಕದ್ಧಮೆ ದಾಖಲಿಸಲು ಪೋಲೀಸ್ ಇಲಾಖೆಯವರಿಗೆ ಪತ್ರ ಬರೆಯಲಾಗಿತ್ತು, ಆದರೆ, ಸದರಿ ನೋಟೀಸ್ ಹಾಗೂ ಪತ್ರದ ಅನ್ವಯ ಶ್ರೀಮತಿ ಖುರ್ಷಿದಾ ಬೇಗಮ್ ಇವರು ಕೆ.ಎ.ಟಿ ಯಲ್ಲಿ ಅರ್ಜಿ ಸಂ:5992/2015 ಅನ್ನು ಸಲ್ಲಿಸಿ ಇಲಾಖೆಯಿಂದ ಕೈಗೊಳ್ಳಲಾದ ಮೇಲಿನ ಕ್ರಮವನ್ನು ಪ್ರಶ್ನಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ).

5. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಣಿಪಾಲ್, ಉಡುಪಿ ಜಿಲ್ಲೆ ಇವರ ವರದಿಯನ್ನು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕುಂದಾಪುರ ವಲಯ, ಕುಂದಾಪುರ, ಉಡುಪಿ ಜಿಲ್ಲೆ ಇವರ ತನಿಖಾ ವರದಿಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಎದುರುದಾರರು ರೂ.4,39,597/– ಮೊತ್ತದ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ವಿಚಾರಣೆಯಿಂದ ದೃಢಪಟ್ಟಿದೆ ಎಂದು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಇವರ ತಮ್ಮ ದಿ:22/05/2015ರ ಪತ್ರದಲ್ಲಿ ತಿಳಿಸಿರುವುದು ಸ್ಪಷ್ಟ ಪಟ್ಟಿರುತ್ತದೆ ಹಾಗೂ ಸದರಿ ದುರುಪಯೋಗಪಡಿಸಿಕೊಂಡಿರುವ ರೂ.4,39,597/– ಶೇ.8ರ ಬಡ್ಡಿಯೊಂದಿಗೆ ಮರು ಪಾವತಿಸಲು ಸಹ ಆದೇಶಿಸಿರುವುದು ಸದರಿ ಪತ್ರದಿಂದ ಕಂಡು ಬರುತ್ತದೆ. (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ).

6. ಇದಲ್ಲದೇ, ಕ್ಷೇತ್ರ ಶಿಕ್ಷಣಾಧಿಕಾರಿ, ಬ್ರಹ್ಮಾವರ ವಲಯ, ಬ್ರಹ್ಮಾವರ ಇವರು ತನಿಖಾ ವರದಿಯನ್ನು ನೀಡಿದ್ದು, ಅದನ್ನು ಪರಿಶೀಲಿಸಿದಲ್ಲಿ ಎದುರುದಾರರು ಶಾಲಾ ನಿರ್ವಹಣಾ ಅನುದಾನ, ನೂತನ ಕಟ್ಟಡದ ಅನುದಾನ, ದಾನಿಗಳ ಅನುದಾನ ಹಾಗೂ ಶಿಕ್ಷಕರ ಅನುದಾನದ ಹಣವನ್ನು ದುರುಪಯೋಗಪಡಿಸಿಕೊಂಡಿರುವುದಾಗಿ ಕಂಡು ಬರುತ್ತದೆ. ಸದರಿ ವರದಿಯಲ್ಲಿ ರಿಬ್ಕೋ ಸ್ಟೀಲ್ ಅಂಗಡಿಯಿಂದ 150 ಚೀಲ ಸಿಮೆಂಟ್ ಖರೀದಿ ಮಾಡಿದ್ದು, ರೂ.33,000/– ಪಾವತಿಸಿರುವುದಾಗಿ ತೋರಿಸಲಾಗಿದೆ. ಆದರೆ, ವ್ಯಾಟ್ ನಮೂದಿಸಿಲ್ಲ ಹಾಗೂ ಟಿಡಿಎಸ್ ಕಠಾವಣೆ ಮಾಡಿಲ್ಲ ಮತ್ತು ಸ್ಟೀಲ್ ಖರೀದಿ ಬಾಬ್ತು ರೂ.40,576/– ರಸೀದಿ ಇರುತ್ತದೆ. ಅದರಲ್ಲಿ ವ್ಯಾಟ್ ಕೂಡ ನಮೂದಿಸಿರುವುದಿಲ್ಲ. ಸದರಿ ರಿಬ್ಕೋ ಸ್ಟೀಲ್ ಅಂಗಡಿಯವರು ಸಿಮೆಂಟ್ ಮಾರುವುದಿಲ್ಲವೆಂದು ದೂರುದಾರರು ತಿಳಿಸಿರುತ್ತಾರೆ. ಇದಲ್ಲದೇ, ದಿನಗೂಲಿ ಹಾಜರಾತಿಯಲ್ಲಿ ದಿನಾಂಕವನ್ನು ನಮೂದಿಸಿರುವುದು ಕ್ರಮಬದ್ಧವಾಗಿರುವುದಿಲ್ಲವೆಂದು ಹಾಗೂ ದಿನಗೂಲಿ ಪಾವತಿ ವೋಚರ್‌ಗೆ ಎಸ್.ಡಿ.ಎಂ.ಸಿ ಅಧ್ಯಕ್ಷರ ಸಹಿ ಇರುವುದಿಲ್ಲವೆಂದು ತಿಳಿಸಿರುವುದು ಕಂಡು ಬರುತ್ತದೆ. ಹಾಗೆಯೇ ದಿ:21/06/2008 ರಲ್ಲಿ ರಿಬ್ಕೋ ಸ್ಟೀಲ್‌ರವರಿಂದ ಸ್ಟೀಲ್ ಖರೀದಿಸಿದ್ದು ರೂ.19,940/– ಹಾಗೂ ರೂ.9,400/– ಕ್ಕೆ ಎರಡು ಬಾರಿ ಸ್ಟೀಲ್ ಖರೀದಿಸಿರುವುದಾಗಿ ತೋರಿಸಲಾಗಿದೆ. ಒಂದನೇ ಬಿಲ್‌ನಲ್ಲಿ ವ್ಯಾಟ್ ಕಡಿತ ಮಾಡಿರುವುದಿಲ್ಲ, 2ನೇ ಬಿಲ್‌ನಲ್ಲಿ ರಿಬ್ಕೋ ಸ್ಟೀಲ್ ನಿಂದ ದಿ:25/06/2008 ರಂದು ಮರ ಖರೀದಿಸಿರುವುದು ಕಂಡು ಬಂದಿದ್ದು, ಈ ಖರೀದಿ ಬಗ್ಗೆ ಸಂಶಯ ಇರುತ್ತದೆ ಎಂದು ತಿಳಸಿರುತ್ತಾರೆ. ಆರ್‌ಎ ಬಿಲ್‌ನಲ್ಲಿ ಕೂಲಿ ಪಾವತಿಗೆ ದಿನಾಂಕವನ್ನು ನಮೂದಿಸಿರುವುದಿಲ್ಲ ಹಾಗೂ ಎಸ್‌ಡಿಎಂಸಿ ಅಧ್ಯಕ್ಷರ ಸಹಿ ಪಡೆದಿರುವುದಿಲ್ಲ. ಶಾಲಾ ಕಟ್ಟಡದ ಕಾಮಗಾರಿ ಬಗ್ಗೆ ಅಳತೆ ಪುಸ್ತಕ ಹಾಜರುಪಡಿಸಿರುವುದಿಲ್ಲ. ಕಾಮಗಾರಿ ಪೂರ್ಣಗೊಂಡ ಬಗ್ಗೆ ಎಸ್‌ಡಿಎಂಸಿ ಯವರಿಂದ ದೃಢೀಕರಣ ಪ್ರತಿ ಪಡೆದಿರುವ ಬಗ್ಗೆ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಇದಲ್ಲದೇ, ಹೆಚ್‌ಎಸ್‌ಬಿ0004/10–11ಕ್ಕೆ ಸಂಬಂಧಿಸಿದಂತೆ ಕಂಪ್ಲೀಷನ್ ಸರ್ಟಿಫಿಕೇಟ್‌ಗೆ ಅಭಿಯಂತರರ ಸಹಿ ಇಲ್ಲದೇ ಇರುವುದನ್ನು ತನಿಖಾಧಿಕಾರಿಯವರು ಪರಿಗಣಿಸಿರುತ್ತಾರೆ. ಕಂಟ್ರಾಕ್ಟರ್ ನೀಡಿದ ಸರ್ಟಿಫಿಕೇಟ್ ನಲ್ಲಿ ಎಸ್‌ಡಿಎಂಸಿ ಯವರ ಸಹಿ ಇರುವುದಿಲ್ಲ. ಎವರೆಸ್ಟ್ ಹಾರ್ಡ್‌ವೇರ್ ರವರಿಂದ ಪಡೆದಿರುವ ರಸೀತಿ ಸಂಖ್ಯೆ: 0474, 0586 ಹಾಗೂ 0587ರ ರಸೀತಿಗಳಲ್ಲಿ ಸಿಮೆಂಟ್ ಖರೀದಿಯ ಬಗ್ಗೆ ವ್ಯಾಟ್ ನಮೂದಿಸಿರುವುದಿಲ್ಲ ಹಾಗೂ ಟಿಡಿಎಸ್ ಕಠಾಯಿಸಿರುವುದಿಲ್ಲ. ಸದರಿ ಖರೀದಿಗೆ ಸಂಬಂಧಿಸಿದ ವೋಚರ್‌ಗಳ ಮೇಲೆ ಎಸ್‌ಡಿಎಂಸಿ ಅಧ್ಯಕ್ಷರ ಸಹಿ ಇರುವುದಿಲ್ಲ.

7. ಕರಾವಳಿ ಟಿಂಬರ್ ಡಿಪೋನಿಂದ ಮರವನ್ನು ಖರೀದಿಸಿರುವುದಾಗಿ ತೋರಿಸಿದ್ದು, ಸದರಿ ಖರೀದಿಗೆ ಸಂಬಂಧಿಸಿದಂತೆ ತೆರಿಗೆ ಕಡಿತ ಮಾಡದೇ ಇರುವುದು ಕಂಡು ಬಂದಿರುತ್ತದೆ. ದಿನಕೂಲಿ ವೋಚರ್‌ಗೆ ಹೆಸರು ದಿನಾಂಕ ಹಾಗೂ ಸ್ವೀಕೃತಿದಾರರ ಸಹಿ ಇರುವುದಿಲ್ಲ. ಡಿಎಸ್‌ಟಿ ಎಜುಕೇಷನ್ ರವರಿಗೆ ಹಣವನ್ನು ಪಾವತಿ ಮಾಡಿದ ಬಗ್ಗೆ ದಾಖಲೆಗಳು ಲಭ್ಯವಿರುವುದಿಲ್ಲ. ಗಣೇಶ್ ಹಾರ್ಡ್‌ವೇರ್‌ನ

ಪಾವತಿ ರೂ.23,379/- ಹಾಗೂ ರೂ.18,573/- ಅನ್ನು ಸಂಸ್ಥೆಯ ಲೆಟರ್ ಹೆಡ್‌ನಲ್ಲಿ ಬರೆದಿರುವುದು ಕಂಡು ಬರುತ್ತದೆ. ಹಾಗೂ ಸದರಿ ರಸೀತಿಗಳಿಗೆ ಎಸ್‌ಡಿಎಂಸಿ ಅಧ್ಯಕ್ಷರ ಸಹಿ ಇರುವುದಿಲ್ಲ. ಗಣೇಶ್ ಹಾರ್ಡ್‌ವೇರ್ ರವರ ಬಿಲ್ಲಿನ ಮೊತ್ತಕ್ಕೆ ಸಂಬಂಧಿಸಿದಂತೆ ರೂ.83,905/- ಕ್ಕೆ ಬಿಲ್ ಇದ್ದು, ಚೆಕ್ ಮುಖೇನ ರೂ.41,952/- ಅನ್ನು ಪಾವತಿಸಿರುವುದಾಗಿ ತೋರಿಸಲಾಗಿದೆ. ಈ ರಸೀತಿ ಮೊತ್ತಕ್ಕೂ ಮತ್ತು ಸಂದಾಯ ಮಾಡಿರುವ ಮೊತ್ತಕ್ಕೂ ವ್ಯತ್ಯಾಸವಿರುವುದು ಕಂಡು ಬಂದಿರುತ್ತದೆ ಮತ್ತು ಈ ವ್ಯತ್ಯಾಸದ ಬಗ್ಗೆ ಎದುರುದಾರರಿಂದ ಯಾವುದೇ ವಿವರಣೆಗಳು ಇರುವುದಿಲ್ಲ.

8. ಶ್ರೀ ಗಣೇಶ್ ಹಾರ್ಡವೇರ್‌ನ ಲೆಟರ್‌ಹೆಡ್‌ನಲ್ಲಿ ಮಾಡಿರುವ ವೋಚರ್ ನಂಬರ್ ರೂ.28,185/- ಹಾಗೂ ರೂ.41,952/- ಅನ್ನು ಸ್ಟೀಲ್ ಖರೀದಿಗಾಗಿ ಹಣ ಸಂದಾಯ ಮಾಡಿರುವ ಬಗ್ಗೆ ರಸೀತಿ ಇದ್ದು, ಅದರಲ್ಲಿ ವ್ಯಾಟ್ ಕಡಿತ ತೋರಿಸಿರುವುದಿಲ್ಲ. ಕಾಮಧೇನು ಹಾರ್ಡ್‌ವೇರ್ ಇವರಿಂದ ಸಿಮೆಂಟ್ ಖರೀದಿಸಿದ ಬಾಬ್ತು ರೂ.29,000/- ವನ್ನು ಶ್ರೀ ಪ್ರಕಾಶ್ ಇವರಿಗೆ ಪಾವತಿಸಿರುವುದು ಕಂಡು ಬಂದಿರುತ್ತದೆ. ಆದರೆ, ವಾಸ್ತವಿಕವಾಗಿ ಅಂಗಡಿ ಹೆಸರಿಗೆ ಚೆಕ್ ನೀಡಿರುವುದಿಲ್ಲ. ಮೂಕಾಂಬಿಕ ಟ್ರೇಡರ್ಸ್ ಬಿಲ್ಲಿನ ಮೊತ್ತವಾದ ರೂ.28,700/- ಅನ್ನು ಶ್ರೀ ಪ್ರಕಾಶ್‌ರವರಿಗೆ ಪಾವತಿಸಿರುವುದು ಕಂಡು ಬರುತ್ತದೆ ಹಾಗೆ ಗಣೇಶ್ ಹಾರ್ಡ್‌ವೇರ್ ರವರ ಬಿಲ್‌ನ ಮೊತ್ತದ ಬಗ್ಗೆ ರೂ.28,185/- ಅನ್ನು ಶ್ರೀ ಪ್ರಕಾಶ್ ರವರ ಹೆಸರಿಗೆ ಜಮಾ ಮಾಡಿರುವುದು ಕಂಡು ಬರುತ್ತದೆ ಎಂದು ತಿಳಿಸಿರುತ್ತಾರೆ. ಹಾಗೆಯೇ ಗಣೇಶ್ ಹಾರ್ಡ್‌ವೇರ್ ರವರಿಗೆ ಪಾವತಿಸಬೇಕಾಗಿದ್ದ ರೂ.23,379/- ಅನ್ನು ಹಾಗೂ ರೂ.18,573/- ಅನ್ನು ಶ್ರೀ ಸುರೇಂದ್ರ ಇವರಿಗೆ ಪಾವತಿಸಿರಿವುದಾಗಿ ಕಂಡು ಬಂದಿರುತ್ತದೆ. ಶ್ರೀ ಗಣೇಶ್ ಹಾರ್ಡ್‌ವೇರ್ ರವರು ಬಿಲ್ಲಿನ ಮೊತ್ತ ರೂ.29,710/- ರಲ್ಲಿ ರೂ.29,000/- ವನ್ನು ಶ್ರೀ ಪ್ರಕಾಶ್‌ರವರಿಗೆ ಪಾವತಿಸಿರುವುದು ಕಂಡು ಬಂದಿರುತ್ತದೆ.

9. ಅನ್ನಪೂರ್ಣ ರೋಡ್‌ಲೈನ್ಸ್‌ಗೆ ರೂ.32,400/- ರಲ್ಲಿ ರೂ.29,000/- ವನ್ನು ಶ್ರೀ ಪ್ರಕಾಶ್ ಇವರಿಗೆ ಪಾವತಿಸಿರುವುದು ಕಂಡು ಬಂದಿರುತ್ತದೆ. ಶ್ರೀ ಗಣೇಶ್ ಹಾರ್ಡ್‌ವೇರ್ ರವರಿಂದ ಒಟ್ಟು 2337.35 ಕೆ.ಜಿ ತೂಕದ ಕಬ್ಬಿಣವನ್ನು ಖರೀದಿಸಿದ್ದಾಗಿದ್ದೆಂದು ಆರೋಪವಿದ್ದು, ದೂರುದಾರರು 3168.00 ಕೆ.ಜಿ ಖರೀದಿಸಲಾಗಿದೆ ಎಂದು ತಿಳಿಸಿರುತ್ತಾರೆ. ಮುಖ್ಯೋಪಾಧ್ಯಾಯರು ನಿರ್ವಹಿಸಿರುವ ಯಾವುದೇ ವೋಚರ್‌ನಲ್ಲೂ ಎಸ್‌ಡಿಎಂಸಿ ಅಧ್ಯಕ್ಷರ ಸಹಿ ಇರುವುದಿಲ್ಲ. ಕಾಮಗಾರಿಗೆ ಸಂಬಂಧಿಸಿದಂತೆ ಎಸ್‌ಡಿಎಂಸಿ ವತಿಯಿಂದ ನಿರ್ಣಯವಾದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಇದಲ್ಲದೇ, ಇಂಜಿನಿಯರ್‌ರವರ ಕಡೆಯಿಂದ ಮೌಲ್ಯಮಾಪನ ವರದಿ ಸಹ ಪಡೆದಿರುವುದು ಕಂಡು ಬರುವುದಿಲ್ಲ. ಹಾಗೆಯೇ ನಿರ್ಮಾಣ್ ಟ್ರೇಡರ್ಸ್ ರವರ ಲೆಟರ್‌ಹೆಡ್ ನಲ್ಲಿ ದಿ:12/03/2010 ರಂದು ರೂ.8,165/- ಅನ್ನು ಪಾವತಿಸಿದ ಬಗ್ಗೆ ರಸೀತಿ ನೀಡಲಾಗಿದ್ದು, ಇದಕ್ಕೆ ಎಸ್‌ಡಿಎಂಸಿ ಯವರ ಸಹಿ ಇರುವುದಿಲ್ಲವೆಂದು, ತಾಯಿ ರೋಡ್‌ಲೈನ್ಸ್

ರಸೀತಿ ಸಂಖ್ಯೆ:94 ಅನ್ನು ಹಾಜರುಪಡಿಸಿದ್ದು, ಇದಕ್ಕೆ ಸರಬರಾಜುದಾರರ ಸಹಿ ಇರುವುದಿಲ್ಲ ಹಾಗೂ ಯಾರ ಹೆಸರಿಗೆ ರಸೀತಿ ನೀಡಲಾಗಿದೆ ಎಂದು ಸಹ ಕಂಡು ಬರುವುದಿಲ್ಲ.

10. ಶಾಲಾ ಕಟ್ಟಡ ದುರಸ್ಥಿ ಯೋಜನೆಗೆ ಸಂಬಂಧಿಸಿದಂತೆ ಬಿಡುಗಡೆಯಾಗಿರುವ ಅನುದಾನವು, ಯಾವ ಯೋಜನೆಯಡಿಯ ಹಣ ಬಿಡುಗಡೆಯಾಗಿದೆ ಎಂದು ಸ್ಪಷ್ಟ ಪಡುವುದಿಲ್ಲ. ಆದರೆ, ಈ ಕಾಮಗಾರಿಗೆ ಸಂಬಂಧಿಸಿದಂತೆ ರೂ.21,946/- ಕ್ಕೆ ರಸೀತಿಯನ್ನು ಇಟ್ಟಿದ್ದು, ರೂ.8,049/- ಗಳು ಏನಾಯಿತು ಎಂಬುದರ ಬಗ್ಗೆ ಮಾಹಿತಿ ಇರುವುದಿಲ್ಲ. ರಸೀತಿಯನ್ನು ಪಿಯುಶ್ ಎನ್ನುವ ವ್ಯಕ್ತಿಗೆ ರೂ.10,840/- ಎಂದು ತೋರಿಸಿದ್ದು, ಶ್ರೀ ವಿಶ್ವನಾಥ ಆಚಾರಿ ಎನ್ನುವ ವ್ಯಕ್ತಿಗೆ ರೂ.20,000/- ಪಾವತಿ ಎಂದು ತೋರಿಸಿರುವುದು ಕಂಡು ಬಂದಿರುತ್ತದೆ. ಆದರೆ, ಸಂಬಂಧಪಟ್ಟಂತಹ ವೋಚರ್‌ಗಳು ನಿಯಮಾನುಸಾರ ನಿರ್ವಹಿಸಿರುವುದು ಕಂಡು ಬಂದಿರುವುದಿಲ್ಲ. ಹೆಚ್‌ಎಸ್‌ಬಿ 73 ರಡಿಯಲ್ಲಿ ರಾಜ್ಯ ವಲಯದ 2007-08ನೇ ಯೋಜನೇತರ ಕೊಠಡಿ ದುರಸ್ಥಿಗೆ ಸಂಬಂಧಿಸಿದಂತೆ ರೂ.20,000/- ವನ್ನು ಖರ್ಚಾಗಿರುವ ಬಗ್ಗೆ ತೋರಿಸಿದ್ದು, ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಎಸ್‌ಡಿಎಂಸಿ ನಿರ್ಣಯವಾಗಿರುವ ಬಗ್ಗೆ ಪುಸ್ತಕ ಲಭ್ಯವಿರುವುದಿಲ್ಲ.

11. ಕರ್ನಾಟಕ ಬ್ಯಾಂಕ್‌ನಿಂದ ಚೆಕ್ ನಂಬರ್ 723090 ರಲ್ಲಿ ರೂ.4,905/- ಅನ್ನು ಸೆಲ್ಫ್ ಚೆಕ್ ಮೂಲಕ ಡ್ರಾ ಮಾಡಿರುವುದಾಗಿ ತೋರಿಸಲಾಗಿದೆ. ಈ ಮೊತ್ತವನ್ನು ಪಾವತಿ ಕಡೆಗೆ ತೋರಿಸಲಾಗಿದೆ. ಚೆಕ್ ನಂ.723090 ರಲ್ಲಿ ರೂ.4,905/- ಅನ್ನು ಡ್ರಾ ಮಾಡಲಾಗಿರುತ್ತದೆ. ನಿರ್ಮಾಣ್ ಟ್ರೇಡರ್ಸ್ ಎನ್ನುವ ಸಂಸ್ಥೆಯ ಹೆಸರಿನಲ್ಲಿ ಲೆಟರ್‌ಹೆಡ್‌ನಲ್ಲಿ ಟೋಟಲ್ ರೂ.4500/- ಎಂದು ತೋರಿಸಿದ್ದು, ನಂತರ ಸದರಿ ವೋಚರ್ ಅನ್ನು ತಿದ್ದು ರೂ.4905/- ಎಂದು ತೋರಿಸಿ ಹಣವನ್ನು ಸೆಲ್ಫ್ ಡ್ರಾ ಮಾಡಲಾಗಿರುತ್ತದೆ. ಅದೇ ಖಾತೆಯಿಂದ ದಿ:10/07/2009 ರಂದು ಚೆಕ್ ನಂಬರ್ 725704 ರಲ್ಲಿ ಶ್ರೀ ಸಂದೇಶ್ ಎಂಬುವವರ ಹೆಸರಿಗೆ ರೂ.4500/- ಅನ್ನು ಡ್ರಾ ಮಾಡಿ, ಶ್ರೀ ಸಂದೇಶ್ ಎನ್ನುವವರಿಗೆ ಪಾವತಿ ಮಾಡಿರುವುದು ಕಂಡು ಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ. 2011-12ನೇ ಸಾಲಿನಲ್ಲಿ ಗ್ರಂಥಾಲಯಕ್ಕಾಗಿ ರೂ.13,000/- ವನ್ನು ಮಂಜೂರು ಮಾಡಿದ್ದು, ರೂ.13,000/- ಅನ್ನು ಖರ್ಚಾಗಿ ತೋರಿಸಿರುತ್ತಾರೆ. ಆದರೆ, ರೂ.1,000/- ವನ್ನು ಶಾಲಾ ಅನುದಾನದಿಂದ ತೆಗೆದಿದ್ದು, ದಾಸ್ತಾನು ಪುಸ್ತಕದಲ್ಲಿ 1000 ಪುಸ್ತಕ ದಾಸ್ತಾನು ಇರುವುದಾಗಿ ತೋರಿಸಲಾಗಿರುತ್ತದೆ. ಆದರೆ, ಮಾಹಿತಿ ಪಕ್ಕಿನಡಿಯಲ್ಲಿ ರಸೀತಿ ನೀಡುವಾಗ ರೂ.1000/- ಗಾಡಿ ಬಾಡಿಗೆ ಎಂದು ತೋರಿಸಿರುವುದು ಕಂಡು ಬಂದಿರುತ್ತದೆ. ಎವರೆಸ್ಟ್ ಹಾರ್ಡ್‌ವೇರ್ ಎನ್ನುವ ಅಂಗಡಿಯಿಂದ 1 1/4 ಇಂಚು ಗೇಟ್‌ವಾಲ್ ಹಾಗೂ ಎರಡು ಟ್ಯಾಪ್‌ಗಳನ್ನು ಖರೀದಿಸಿದ್ದು, ಬಿಲ್ಲಿನ ಮೊತ್ತ ರೂ.95.00 ಆಗಿದ್ದು, ಸದರಿ ಬಿಲ್ಲಿನ ದಿನಾಂಕವನ್ನು ತಿದ್ದಿರುವುದು ಕಂಡು ಬಂದಿರುತ್ತದೆಂದು ತಿಳಿಸಿರುತ್ತಾರೆ. ಹಾಗೂ ಗೇಟ್‌ವಾಲ್‌ನ ಕ್ರಯ 75 ಅನ್ನು ತಿದ್ದಿ 1075 ಮಾಡಿ ಇಟ್ಟು

ರೂ.2,000/- ವನ್ನು ಶ್ರೀ ಅಶೋಕ್ ಎನ್ನುವವರಿಗೆ ಪಾವತಿ ಮಾಡಿರುವುದಾಗಿ ತೋರಿಸಲಾಗಿದೆ. ಆದರೆ, ರಸೀತಿಯಲ್ಲಿ ಶ್ರೀ ಥಾಮಸ್ ಎನ್ನುವವರು ಸಹಿಮಾಡಿದ್ದು ಕಂಡು ಬರುತ್ತದೆ. ದಿ:26/10/2009 ರಂದು ಶ್ರೀ ಸಂತೋಷ್ ಎನ್ನುವವರಿಗೆ ಚೆಕ್ ಮೂಲಕ ಅಂದರೆ ಚೆಕ್ ನಂಬರ್ 724673 ರ ಮುಖೇನ ರೂ.2,000/-ವನ್ನು ಪಾವತಿ ಮಾಡಿರುವುದು ನಿಯಮಾನುಸಾರ ಇರುವುದಿಲ್ಲವೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಶಾಲಾ ಅನುದಾನದಿಂದ ಕರ್ನಾಟಕ ಬ್ಯಾಂಕ್ ಚೆಕ್ ನಂಬರ್ 724674 ಮತ್ತು 724675ರ ಮುಖೇನ ರೂ.3000+ರೂ.3000= ಒಟ್ಟು ರೂ.6000/- ಮೊತ್ತದ ಸಾಮಗ್ರಿ ಖರೀದಿಸಿದ್ದು, ಸರಬರಾಜುದಾರರಿಗೆ ಸದರಿ ಮೊತ್ತದ ಹಣವನ್ನು ಪಾವತಿಸಿರುವ ಬಗ್ಗೆ ಯಾವುದೇ ಸಾಕ್ಷ್ಯಧಾರಗಳು ಇರುವುದಿಲ್ಲ.

12. ದಿ:14/11/2009 ರಂದು ಮಹಾಂತೇಶ್ ಎನ್ನುವವರಿಗೆ ರೂ.14,465/- ಅನ್ನು ಕರ್ನಾಟಕ ಬ್ಯಾಂಕ್ ಚೆಕ್ ನಂಬರ್ 474677 ರಡಿ ಪಾವತಿಸಿರುವ ಬಗ್ಗೆ ವೋಚರ್ ಇಟ್ಟಿರುತ್ತಾರೆ. ಆದರೆ, ಇದು ಮೂಲ ರಶೀದಿ ಎನ್ನುವ ಬಗ್ಗೆ ಅನುಮಾನವಿರುತ್ತದೆ. ನಿರ್ಮಾಣ ಟ್ರೇಡರ್ಸ್ ಎನ್ನುವ ಸಂಸ್ಥೆಯ ಹಲವಾರು ರಸೀತಿಗಳು ಲಭ್ಯವಿದ್ದು, ಸದರಿ ರಸೀತಿಗಳು ಮೂಲ ರಸೀತಿಗಳಾಗಿರುವುದಿಲ್ಲ. ಆದರೆ, ರೂ.2,800/- ಕ್ಕೆ ದಿನಾಂಕ 29/01/2010 ರಂದು ಚೆಕ್ ಮೂಲಕ (ಚೆಕ್ ನಂಬರ್ 725703) ಶ್ರೀ ರಾಮಚಂದ್ರ ಆಚಾರಿಗೆ ನೀಡಿರುವುದು ಕಂಡು ಬರುತ್ತದೆ. ಹಳೇ ಕಟ್ಟಡದ ವೈರಿಂಗ್ ರಿಪೇರಿ ಬಾಬ್ತು ರೂ.14,212/- ರ ರಸೀತಿಯು ಖಾಲಿ ಕಾಗದದಲ್ಲಿ ಲಭ್ಯವಾಗಿದ್ದು, ಈ ಬಗ್ಗೆ ಶ್ರೀ ಸುಧೀಂದ್ರ ಎನ್ನುವವರು ರೂ.14,212/- ಅನ್ನು ಸ್ವೀಕರಿಸಿರುತ್ತಾರೆಂದು ತೋರಿಸಲಾಗಿದೆ (ನಂದಿಕೇಶ್ವರ ಎಲೆಕ್ಟ್ರೀಕಲ್ಸ್) ಎಂದು ಇರುತ್ತದೆ. ಆದರೆ, ಸದರಿ ರೂ.14,212/-ರ ಪಾವತಿಯು ಮೊದಲ ಚೆಕ್ ನಂಬರ್ 725706 ರಡಿಯಲ್ಲಿ ಹಾಗೂ ರೂ.7,382/- ಕ್ಕೆ ಶ್ರೀ ಸುಧೀಂದ್ರರವರ ಹೆಸರಿಗೂ ಚೆಕ್ ನಂಬರ್ 725707 ರಡಿಯಲ್ಲಿ ಹಾಗೂ ರೂ.6,830/- ಅನ್ನು ಮುಖ್ಯ ಶಿಕ್ಷಕರು ಸೆಲ್ಫ್ ಡ್ರಾ ಮಾಡಿರುತ್ತಾರೆ. ಶ್ರೀ ರಾಮದಾಸ್ ಅವರ ಹೆಸರಿಗೆ ಚೆಕ್ ನಂಬರ್ 725661 ರಡಿಯಲ್ಲಿ ರೂ.4530/- ಅನ್ನು ಪಾವತಿಸಿರುವುದಾಗಿ ತೋರಿಸಿದ್ದು, ವೋಚರ್‌ನಲ್ಲಿ ತಿದ್ದುಪಡಿಯಾಗಿರುವುದು ಕಂಡು ಬಂದಿರುತ್ತದೆಂದು ತಿಳಿಸಿರುತ್ತಾರೆ. ಆಂಜನೇಯ ಸ್ಟೋರ್ಸ್ ರಶೀದಿಯಲ್ಲಿ ಪೇಪರ್ ಮಾತ್ರ ಖರೀದಿ ಮಾಡಿದ್ದು, ರೂ.28.00 ಎಂದು ತೋರಿಸಿರುವುದು ಕಂಡು ಬರುತ್ತದೆ. ಸದರಿ ವೋಚರ್‌ನಲ್ಲಿ ರೂ.150.00 ಹಾಗೂ ರೂ.250.00 ಅನ್ನು ತಿದ್ದಿರುವುದು ಕಂಡು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ.

13. ದಿ:06/10/2010 ರಂದು ಕರ್ನಾಟಕ ಬ್ಯಾಂಕ್‌ನಿಂದ ಚೆಕ್ ನಂಬರ್ 466400 ಮೂಲಕ ರೂ.6103/- ಅನ್ನು ದೂರುದಾರರು ಸೆಲ್ಫ್ ಡ್ರಾ ಮಾಡಿದ್ದು, ಇದು ನಿಯಮಬಾಹಿರವಾಗಿರುತ್ತದೆ ಎಂದು ಮತ್ತು ಈ ಸಂಬಂಧ ವ್ಯವಹಾರದ ಮೂಲ ರಸೀತಿಯನ್ನು ಹಾಜರುಪಡಿಸಿರುವುದಿಲ್ಲ (ಲಭ್ಯವಿರುವುದಿಲ್ಲ)

ಎಂದು ತಿಳಿಸಿರುತ್ತಾರೆ. ಶ್ರೀ ರಾಮಚಂದ್ರ ಆಚಾರಿ ಎನ್ನುವವರಿಗೆ ಹಲವಾರು ಪಾವತಿಗಳನ್ನು ಮಾಡಿದ್ದು, ಸದರಿ ಪಾವತಿಗಳು ನಿಯಮಾನುಸಾರವಾಗಿರುವುದಿಲ್ಲ. ದಿ:12/08/2010 ರಂದು ಮುಖ್ಯ ಶಿಕ್ಷಕರಾದ ಶ್ರೀಮತಿ ಖುರ್ಷಿದಾ ಬೇಗಮ್‌ರವರು ರೂ.8,140/– ಮೊತ್ತದ ಹಣವನ್ನು ಸೆಲ್ಫ್‌ಚೆಕ್ ಮೂಲಕ ಡ್ರಾ ಮಾಡಿದ್ದು, ಇದು ನಗದು ಪುಸ್ತಕದಲ್ಲಿ ದಾಖಲಾಗಿರುತ್ತದೆ. ಈ ಹಣವನ್ನು ಯಾವ ಕಾರಣಕ್ಕಾಗಿ ಡ್ರಾ ಮಾಡಲಾಗಿದೆ ಎಂಬುದನ್ನು ನಮೂದಿಸಿರುವುದಿಲ್ಲವೆಂದು ಹಾಗೂ ಮೂಲ ರಶೀದಿಯನ್ನು ಲಭ್ಯವಿರುವುದಿಲ್ಲ. 12/06/2010ರ ಡೆಲವರಿ ಚಲನ್‌ನಲ್ಲಿ ಪೈಪ್ ಖರೀದಿ ಎಂದು ರಶೀದಿಯನ್ನು ತೋರಿಸಿದ್ದು, ಖರೀದಿಯ ಮೊತ್ತ ರೂ.1,640/– ಎಂದು ಇರುತ್ತದೆ. ಇದರೊಡನೆ ರೂ.360/– ಅನ್ನು ರಿಕ್ಷಾ ಬಾಡಿಗೆ ಮತ್ತು ಲೇಬರ್ ಚಾರ್ಜ್ ಎಂದು ತೋರಿಸಿರುವುದು ಕಂಡು ಬರುತ್ತದೆ. ಖರೀದಿ ರಶೀದಿಯಲ್ಲಿ ಸೇರಿಸಿರುವುದು ತಪ್ಪಾಗಿರುತ್ತದೆ ಹಾಗೂ ಒಟ್ಟು ರೂ.2000/– ಮೊತ್ತದ ಹಣವನ್ನು ಶ್ರೀ ಆಸಿಮ್ ಎಂಬುವ ವ್ಯಕ್ತಿಗೆ ಮಂಜೂರು ಮಾಡಿರುವುದಾಗಿ ತೋರಿಸಲಾಗಿರುತ್ತದೆ.

14. ದಿ:08/09/2010 ರಂದು ಚೆಕ್ ನಂಬರ್ 466399ರಲ್ಲಿ ರೂ.1,445/– ಅನ್ನು ಪಾವತಿ ಎಂದು ತೋರಿಸಲಾಗಿದ್ದು, ಅದರಲ್ಲಿ ರೂ.445/– ಅನ್ನು ವಸ್ತು ಖರೀದಿಗೆಂದು ಹಾಗೂ ರೂ.1000/– ಅನ್ನು ಮಜೂರಿ ಎಂದು ದಾಖಲಿಸಿರುವುದು ಕಂಡು ಬರುತ್ತದೆ. ಇದು ರಶೀತಿಯಾಗಿರದೆ ಎಸ್ಟಿಮೇಟ್ ಆಗಿರುತ್ತದೆ ಮತ್ತು ಸದರಿ ಎಸ್ಟಿಮೇಟ್ ಯಾವ ಅಂಗಡಿಗೆ ಸೇರಿದ್ದೆಂಬುದು ತಿಳಿದು ಬರುವುದಿಲ್ಲವೆಂದು ತಿಳಿಸಿರುತ್ತಾರೆ. ಇದಲ್ಲದೇ, ಸದರಿ ವೋಚರ್‌ಮೇಲೆ ಪೇಯ್ಡ್ ಅಂಡ್ ಕ್ಯಾನ್ಸಲ್ಡ್ ಎಂದು ನಮೂದಿಸಿರುವುದಿಲ್ಲ. ದಿ:30/08/2010 ರಂದು ಚೆಕ್ ನಂಬರ್ 466397ರ ಮೂಲಕ ಎದುರುದಾರರು ಸೆಲ್ಫ್ ಡ್ರಾ ಮಾಡಿದ್ದು, ಇದಕ್ಕೆ ಯಾವುದೇ ರಶೀತಿಯನ್ನು ಹಾಜರುಪಡಿಸಿರುವುದಿಲ್ಲ. ಚೆಕ್ ನಂಬರ್ 726667ರ ಮೂಲಕ ಶ್ರೀ ಸತೀಶ್ ಎನ್ನುವವರಿಗೆ ದಿ:16/08/2010ರಂದು ರೂ.1,900/– ಪಾವತಿ ಮಾಡಿರುವುದಾಗಿ ತೋರಿಸಿದ್ದು, ಇದು ಕ್ರಮಬದ್ಧವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

15. ಕರ್ನಾಟಕ ಬ್ಯಾಂಕ್ ನಿಂದ ರೂ.3247/– ಅನ್ನು ಚೆಕ್ ನಂಬರ್ 696334ರಮುಖೇನ ವರ್ಗಾವಣೆ ಮಾಡಿರುವುದಾಗಿ ಇದ್ದು, ಸದರಿ ಮೊತ್ತವನ್ನು ನಗದು ಪುಸ್ತಕದಲ್ಲಿ ದಾಖಲು ಮಾಡಲಾಗಿರುತ್ತದೆ. ಆದರೆ, ಈ ಬಗ್ಗೆ ರಶೀದಿ ಲಭ್ಯವಿರುವುದಿಲ್ಲ. ರೂ.3,247/– ಅನ್ನು ಕರ್ನಾಟಕ ಬ್ಯಾಂಕ್‌ನ ಎಸ್‌ಎಸ್‌ಎ ಖಾತೆಯಿಂದ ಎಚ್.ಎಂ. ಖಾತೆಗೆ ವರ್ಗಾವಣೆ ಮಾಡಿ ರೂ.4,700/– ಅನ್ನು ಪ್ರಶಾಂತ್ ಎನ್ನುವವರಿಗೆ ಪಾವತಿ ಮಾಡಿರುವುದು ಕಂಡು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಈ ವ್ಯವಹಾರವು ಸಹ ಕ್ರಮಬದ್ಧವಲ್ಲವೆಂದು ತಿಳಿಸಿರುತ್ತಾರೆ. ಇದಲ್ಲದೇ ಶ್ರೀ ರಾಮಚಂದ್ರ ಆಚಾರಿ ಇವರಿಗೆ ನೀಡಿದ ಮೊತ್ತದ ಹಣವನ್ನು ತಿದ್ದಿರುವುದು ಹಾಗೂ ವೋಚರ್ ಅನ್ನು ತಿದ್ದಿರುವುದು ಕಂಡು ಬಂದಿದೆ ಎಂದು ತಿಳಿಸಿರುತ್ತಾರೆ. ಶ್ರೀ ರಾಮಚಂದ್ರ ಆಚಾರಿ ಇವರಿಗೆ ರೂ.3560/– ಅನ್ನು ಪಾವತಿಸಿರುವುದಾಗಿ

ತೋರಿಸಲಾಗಿದೆ. ಗ್ಯಾಲಾಕ್ಸಿ ಸ್ಪೋರ್ಟ್ಸ್ ಕೊಟೇಷನ್ ಅನ್ನು ರಶೀದಿಯಾಗಿ ಪರಿಗಣಿಸಿ ರೂ.6870/- ಕ್ಕೆ ವೋಚರ್ ತಯಾರಿಸಿ ಅದನ್ನು ರೂ.5000/- ಕ್ಕೆ ಸೀಮಿತಗೊಳಿಸಲಾಗಿದೆ ಎಂದು ತೋರಿಸಲಾಗಿದೆ ಹಾಗೂ ದಿ:16/09/2011 ರಂದು ಸದರಿ ಮೊತ್ತವನ್ನು ಡ್ರಾ ಮಾಡಲಾಗಿರುತ್ತದೆ. ಆದರೆ, ಸದರಿ ಕೊಟೇಷನ್‌ನಲ್ಲಿ ತೋರಿಸಿರುವಂತೆ ಟಿ-ಶರ್ಟ್‌ಗಳನ್ನು ಖರೀದಿಸಿರುವುದಿಲ್ಲ. ಟಿ-ಶರ್ಟ್‌ಗಳನ್ನು ದಾನಿಗಳಾದ ಶ್ರೀ ಆರ್.ಚಿ. ಬಾಲ್ಡ್ ಎನ್ನುವವರು ನೀಡಿರುತ್ತಾರೆ. ಆದರೆ, ಮೇಲೆ ಹೇಳಿದ ಮೊತ್ತಕ್ಕೆ ಹಣವನ್ನು ಚೆಕ್ ಮುಖೇನ ಸೆಲ್ಫ್ ಡ್ರಾ ಮಾಡಿರುವುದು ಕಂಡು ಬರುತ್ತದೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಚೆಕ್ ನಂಬರ್ 593001 ಹಾಗೂ 593002 ಈ ಚೆಕ್‌ಗಳ ಮೂಲಕ ರೂ.7000/- ಅನ್ನು ಪಾವತಿಯಾಗಿ ತೋರಿಸಿದ್ದು, ಚೆಕ್ ನಂಬರ್ 592110ರಲ್ಲಿ ರೂ.840/- ಅನ್ನು ಡ್ರಾ ಮಾಡಿರುವುದಾಗಿ ತೋರಿಸಿದ್ದು, ಸದರಿ ಒಟ್ಟು ರೂ.7840/- ರ ಮೊತ್ತಕ್ಕೆ ವೋಚರ್‌ಗಳನ್ನು ಇಟ್ಟಿರುವುದಿಲ್ಲ.

16. ಕಂಪ್ಯೂಟರ್ ರಿಪೇರಿ ಬಾಬ್ತು ಎಂದು ರೂ.2,977/- ಅನ್ನು ಚೆಕ್ ನಂಬರ್ 234792 ರ ಮುಖೇನ ಪಾವತಿಸಿರುವುದಾಗಿ ತೋರಿಸಲಾಗಿದೆ. ಆದರೆ, ಇದಕ್ಕೆ ವೋಚರ್ ಲಭ್ಯವಿರುವುದಿಲ್ಲ. ದಿ:30/03/2012 ರಂದು ರೂ.5100/- ಅನ್ನು ಚೆಕ್ ನಂಬರ್:234796ರಡಿಯಲ್ಲಿ ಡ್ರಾ ಮಾಡಿರುವುದಾಗಿ ತೋರಿಸಿದ್ದು, ಇದನ್ನು ಎಂ.ಎನ್. ಕಂಪ್ಯೂಟರ್ಸ್ ಇವರಿಗೆ ಸಂಬಂಧಿಸಿದ ವೋಚರ್‌ಗೆ ಡ್ರಾ ಮಾಡಲಾಗಿದೆ ಎಂದು ತೋರಿಸಿರುತ್ತಾರೆ. ಆದರೆ, ಸದರಿ ವೋಚರ್‌ಅನ್ನು ಖಾಲಿ ಹಾಳೆಯ ಮೇಲೆ ಬರೆದು ಕೈಯಲ್ಲಿ ಟಿನ್ ನಂಬರ್ ಬರೆದಿರುವುದು ಕಂಡು ಬರುತ್ತದೆ. ಆದ್ದರಿಂದ, ಇದು ಕ್ರಮಬದ್ಧವಾದ ವ್ಯವಹಾರವಲ್ಲವೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ.

17. ನಿರ್ಮಾಣ ಟ್ರೇಡರ್ಸ್ ಇವರ ಹೆಸರಿನ ವೋಚರ್ಸ್‌ಗಳು ಪರಿಶೀಲನೆಗೆ ಲಭ್ಯವಿರುವುದಿಲ್ಲ. ರೂ.500/- ಅನ್ನು ಚೆಕ್ ನಂಬರ್ 299980ರಡಿಯಲ್ಲಿ ಸೆಲ್ಫ್ ಡ್ರಾ ಮಾಡಿದ್ದು, ಇದಕ್ಕೆ ಸಂಬಂಧಿಸಿದ ವೋಚರ್ ತಿದ್ದಿರುವುದು ಕಂಡು ಬರುತ್ತದೆ ಎಂದು ತಿಳಿಸಿರುತ್ತಾರೆ. ಶಾಲಾ ದುರಸ್ಥಿ ನಿರ್ವಹಣೆ ಕುರಿತು ರೂ.10,387/- ಅನ್ನು ಖರ್ಚಾಗಿ ತೋರಿಸಿದ್ದು, ಇದಕ್ಕೆ ಸಂಬಂಧಿಸಿದ ಹಣವನ್ನು ಚೆಕ್ ನಂಬರ್ 299996ರ ಮುಖೇನ ಡ್ರಾ ಮಾಡಿರುವುದು ಕಂಡು ಬಂದಿರುತ್ತದೆ. ಸದರಿ ಮೊತ್ತದಲ್ಲಿ ಪೇಯಿಂಟ್ ಖರೀದಿ ಕುರಿತು ಒಟ್ಟು ರೂ.5,587/- ಕ್ಕೆ ವೋಚರ್ ಇದ್ದು, ಲೇಬರ್ ಚಾರ್ಜ್ ಗೆ ಸಂಬಂಧಿಸಿದಂತೆ ಎವರೆಸ್ಟ್ ಹಾರ್ಡ್‌ವೇರ್‌ನ ಎಸ್ಟಿಮೇಟ್ ಪ್ರತಿಯಲ್ಲಿ ರೂ.4,800/- ಅನ್ನು ಪಾವತಿಸಿರುವುದಾಗಿ ಕಂಡು ಬಂದಿರುತ್ತದೆ. ಆದ್ದರಿಂದ, ಈ ರಶೀತಿ ಸರಿ ಇರುವುದಿಲ್ಲವೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ದಿ:01/09/2012 ರಂದು ಚೆಕ್ ನಂಬರ್ 299997ರಡಿಯಲ್ಲಿ ರೂ.5060/- ಡ್ರಾ ಮಾಡಿದ್ದು, ಇದಕ್ಕೆ ಸಂಬಂಧಿಸಿದಂತೆ ಕೈಯಲ್ಲಿ ಬರೆದಿರುವ ವೋಚರ್ ಅನ್ನು ಹಾಜರುಪಡಿಸಲಾಗಿರುತ್ತದೆ. ಇದು

ನಿಯಮಾನುಸಾರವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಈ ಸಂಬಂಧ ಎವರೆಸ್ಟ್ ಹಾರ್ಡ್‌ವೇರ್ ರಸೀತಿಯಲ್ಲಿ ರೂ.200/– ಎಂದು ಮಜೂರಿ ಸೇರಿಸಿರುವುದು ಕ್ರಮಬದ್ಧವಾಗಿರುವುದಿಲ್ಲ. ದಿ:15/09/2012 ರಂದು ನಿರ್ಮಾಣ ಟ್ರೇಡರ್ಸ್ ಇವರಿಂದ ಕೈಬರಹದ ರಸೀತಿಯನ್ನು ಪಡೆದಿದ್ದು, ಇದರಲ್ಲಿ ರೂ.200/– ಮೊತ್ತದ ಸಾಮಗ್ರಿ ಖರೀದಿಯ ಬಗ್ಗೆ ತೋರಿಸಲಾಗಿರುತ್ತದೆ. ಈ ವೋಚರ್‌ಗೆ ಸಂಬಂಧಿಸಿದಂತೆ ಶ್ರೀ ರಾಮಚಂದ್ರ ಆಚಾರಿ ಇವರಿಗೆ ರೂ.1200/– ಅನ್ನು ಪಾವತಿ ಮಾಡಿರುವುದಾಗಿ ತೋರಿಸಲಾಗಿದೆ. ಈ ಪಾವತಿಯು ನಿಯಮಾನುಸಾರ ಇರುವುದಿಲ್ಲವೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಮಕ್ಕಳ ಸಂಚಾರಕ್ಕೆ ಸಂಬಂಧಿಸಿದಂತೆ ರೂ.5000– ಮೊತ್ತದ ವೋಚರ್ ಇಟ್ಟಿದ್ದು, ಇದರಲ್ಲಿ ಹಣವನ್ನು ಪಡೆದವರ ವಿವರ ಹಾಗೂ ರಶೀದಿ ಕ್ರಮಬದ್ಧವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

18. ದಾನಿಗಳು ನೀಡಿದ ಹಣದಲ್ಲಿ ಬಹುಮಾನ ನೀಡುವ ಉಲ್ಲೇಖವಿದ್ದು, ಅದು ಬಹುಮಾನ ವಿತರಿಸಿದ ಬಗ್ಗೆ ವಹಿ ಇರುವುದಿಲ್ಲ. ಆದರೆ, ಸಿಹಿ ತಿಂಡಿ ವಿತರಿಸಿರುವ ಬಗ್ಗೆ ನಮೂದು ಇರುತ್ತದೆ ಮತ್ತು ಜಯಪ್ರಕಾಶ್ ಬೇಕರಿಯ ರಶೀತಿ ಪರಿಶೀಲನೆಗೆ ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ. ವೋಚರ್‌ನಂಬರ್ 16/0809 ದಿ:21/06/2008 ರನ್ನು ಪರಿಶೀಲಿಸಿದ್ದು, ಅಡಿಗೆ ಕೋಣೆಯಿಂದ ಕೊಳವೆ ನೀರು, ಇಂಗು ಹೊಂಡಕ್ಕೆ ಹೋಗುತ್ತಿದ್ದು, ಸದರಿ ಇಂದು ಹೊಂಡ ತೋಡಿದ ಬಾಬ್ತು ಮತ್ತು ಇಂಗು ಹೊಂಡ ನಿರ್ಮಾಣದ ಬಗ್ಗೆ ಶ್ರೀ ಚಂದ್ರಣ್ಣ ಎನ್ನುವವರಿಗೆ ರೂ.500/– ಅನ್ನು ಪಾವತಿ ಮಾಡಿರುವುದಾಗಿ ತೋರಿಸಿದ್ದು, ರಶೀತಿಯಲ್ಲಿ ರೂ.3135/– ಎಂದು ತಿದ್ದಿ ಪಾವತಿ ಮಾಡಿರುವುದಾಗಿ ತೋರಿಸಿರುತ್ತಾರೆ. ಇದು ದುರುದ್ದೇಶದಿಂದ ಮಾಡಿರುವುದಾಗಿ ಕಂಡು ಬರುತ್ತದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಯವರು ತಿಳಿಸಿರುತ್ತಾರೆ. ದಾನಿಗಳು ನೀಡಿದ ರೂ.10,000/– ರೂ.15,000/– ಮತ್ತು ರೂ.700/– ರ ಮೇಲಿನ ಬಡ್ಡಿಯನ್ನು ಪಡೆದು ವಿತರಿಸಿದ ಮಾಹಿತಿ ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಎಲ್ಲ ನ್ಯೂನತೆಗಳ ಹಿನ್ನೆಲೆಯಲ್ಲಿ ಎದುರುದಾರರನ್ನು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಇವರು ಆದೇಶ ಹೊರಡಿಸಿ ರೂ.4,39,597/– ಅನ್ನು ದುರುಪಯೋಗಪಡಿಸಿಕೊಂಡಿದ್ದು, ಈ ಮೊತ್ತವನ್ನು ಶೇ.8ರ ಬಡ್ಡಿಯೊಂದಿಗೆ 15 ದಿನಗಳ ಒಳಗೆ ಪಾವತಿಸಲು ತಿಳಿಸಿರುತ್ತಾರೆ. ಸದರಿ ಮೊತ್ತವನ್ನು 15 ದಿನಗಳ ಒಳಗಾಗಿ ಪಾವತಿಸಲು ವಿಫಲರಾದಲ್ಲಿ ಸದರಿ ಮೊತ್ತವನ್ನು ಎದುರುದಾರರ ಪಿಂಚಣಿ ಸೌಲಭ್ಯದಿಂದ ವಸೂಲಾತಿ ಮಾಡಲು ಮಾನ್ಯ ಮಹಾಲೇಖಪಾಲಕರೊಡನೆ ಪತ್ರ ವ್ಯವಹರಿಸಿ ಹಣವನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಂಗಳೂರು ಇಲ್ಲಿಯ ಎಸ್‌ಡಿಎಂಸಿ ಖಾತೆಗೆ ಜಮಾ ಮಾಡಲು ಕ್ರಮ ವಹಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿರುವುದು ಕಂಡು ಬರುತ್ತದೆ. (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ತಿಳಿಸಿರುವಂತೆ ಎದುರುದಾರರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಂಗಳೂರು ಇಲ್ಲಿನ ಶಾಲೆಗೆ ಬಿಡುಗಡೆಯಾದ ಅನುದಾನಗಳ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ.

19. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕಿನ ಬಡಾಕೆರೆ ಹಂಗಳೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ವಿವಿಧ ಯೋಜನೆಗಳಡಿ ಬಿಡುಗಡೆಯಾದ ಅನುದಾನಲ್ಲಿ, ಶ್ರೀಮತಿ ಖುರ್ಷಿದ್ ಬೇಗಂ.ಕೆ, ಮುಖ್ಯೋಪಾಧ್ಯಾಯಿನಿ (ನಿವೃತ್ತ), ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಡಾಕೆರೆ ಹಂಗಳೂರು, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕು, ಬಡಾಕೆರೆ ಹಂಗಳೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಬಿಡುಗಡೆಯಾದ ವಿವಿಧ ಅನುದಾನಗಳ ಹಣವನ್ನು ದುರುಪಯೋಗಪಡಿಸಿಕೊಂಡಿದ್ದು, ಸದರಿ ದುರುಪಯೋಗಪಡಿಸಿಕೊಳ್ಳಲಾದ ಮೊತ್ತವನ್ನು ಶ್ರೀಮತಿ ಖುರ್ಷಿದ್ ಬೇಗಂ.ಕೆ ರವರಿಂದ ಬಡ್ಡಿ ಸಮೇತ ವಸೂಲಿ ಮಾಡಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಡಾಕೆರೆ ಹಂಗಳೂರು ಇಲ್ಲಿಯ ಎಸ್‌ಡಿಎಂಸಿ ಖಾತೆಗೆ ಜಮಾ ಮಾಡಲು ಕಾನೂನು ಪ್ರಕಾರ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಕೈಗೊಂಡ ಕ್ರಮದ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 8-3-17

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.

8/3/17